2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ., ದಂಡಾಧಿಕಾರಿಗಳವರ
ನ್ಯಾಯಾಲಯ, ಕೃಷ್ಣರಾಜಪೇಟೆ
ಸಿ.ಸಿ. ನಂ. **281/2019**

| | | |
|---|---|---|
| ಸಾಕ್ಷಿದಾರರ ಹೆಸರು | ಶಿವರಾಜು | ಪ್ರಾಸ - 8 ಚಾ.ಸಾ - 8 |
| ತಂದೆಯ/ಗಂಡನ ಹೆಸರು | ನಂಜೇಗೌಡ | |
| ವಯಸ್ಸು | 43 ವರ್ಷ | |
| ವೃತ್ತಿ | ಚಾಲಕ | |
| ವಾಸ ಸ್ಥಳ | ಚಿಕ್ಕೋಸಹಳ್ಳಿ | |

ಸಾಕ್ಷಿಗೆ ದಿನಾಂಕಃ **04.02.2026** ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎ. ಪಿ. ಪಿ. ಯವರಿಂದ,

ಸಾಕ್ಷಿಗೆ ನಿ.ಪಿ.4 ಅನ್ನು ತೋರಿಸಲಾಗಿ ಅದರಲ್ಲಿ ಸಾಕ್ಷಿಯ ಸಹಿ ಇದ್ದು, ಸದರಿ ಸಹಿಯನ್ನು ನಿ.ಪಿ.4(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ 2018 ರಲ್ಲಿ ಪೊಲೀಸ್‌ರ ಕೋರಿಕೆಯ ಮೇರೆಗೆ ನಮ್ಮ ಗ್ರಾಮದಲ್ಲಿ ಸಹಿ ಮಾಡಿದ್ದು, ಅದರಲ್ಲಿ ಬರೆದಿರುವ ವಿಚಾರ ಗೊತ್ತಿರುವುದಿಲ್ಲ ಹಾಗೂ ನನ್ನ ಜೊತೆ ಯಾರು ಯಾರು ಇದ್ದರು ಎಂದು ಗೊತ್ತಿರುವುದಿಲ್ಲ. ಆ ಸಂದರ್ಬದಲ್ಲಿ ಯಾವ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ಕೋರುತ್ತಿದ್ದು, ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿಯು ಸಾಕ್ಷಿಯನ್ನು ನುಡಿದಿದ್ದರಿಂದ ಹಾಗೂ ಪ್ರಕರಣದ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಪಾಟೀ ಸವಾಲನ್ನು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ. ಅವರಿಂದ.

ದಿನಾಂಕ: 31.12.2018 ರಂದು ಬೆಳಿಗ್ಗೆ 10:30 ಗಂಟೆಯಿಂದ 11:15 ರವರೆಗೆ ನನ್ನ ಹಾಗೂ ಚಾಸಾ 8 ರವರ ಸಮಕ್ಷಮ ಪೊಲೀಸ್‌ರು ಆರೋಪಿ ಹಾಗೂ ಚಾಸಾ 1 ರವರ ಮದ್ಯ ಆದ ಜಗಳದ ವಿಚಾರವಾಗಿ ಸ್ಥಳದಲ್ಲಿ ಮಹಜರ್ ಮಾಡಿದ್ದು, ಆ ಸಂದರ್ಬದಲ್ಲಿ ಒಂದು ಕಬ್ಬಿಣದ ಮಚ್ಚು, ಕುಡುಗೋಲು ಹಾಗೂ ಮರದ ದೊಣ್ಣೆ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಬದಲ್ಲಿ ನಿ.ಪಿ.4 ಕ್ಕೆ ಸಹಿ ಮಾಡಲಾಗಿರುತ್ತದೆ ಎಂದರೆ ಮಹಜರ್ ಮಾಡಿದ ನಂತರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಸ ಒ .**

C/c 2 ನೇ ಸಿವಿಲ್ **ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**